**ಕನ್ನಡ ವಿಶ್ವವಿದ್ಯಾಲಯ, ಹಂಪಿ.**
ವಿದ್ಯಾರಣ್ಯ–೫೮೩೨೭೬. ಹೊಸಪೇಟೆ (ತಾ) ಬಳ್ಳಾರಿ (ಜಿ)

# ನೇಮಕಾತಿ ಅಧಿಸೂಚನೆ

**ವಿಷಯ :** ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದಲ್ಲಿ (ಹೈದ್ರಾಬಾದ್ ಕರ್ನಾಟಕ ೩೭೧ಜೆಗೆ ಅನ್ವಯಿಸಿ) ಖಾಲಿಯಿರುವ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ :** ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ ಇಡಿ೫೮೨ ಯುಎನ್ಇ ೨೦೧೪
ದಿನಾಂಕ ೨೬–೦೯–೨೦೧೬.

ಕನ್ನಡ ವಿಶ್ವವಿದ್ಯಾಲಯದಲ್ಲಿ ೩೭೧(ಜೆ) ದನ್ವಯ ಖಾಲಿ ಇರುವ ವಿವಿಧ ಬೋಧಕೇತರ ಹುದ್ದೆಗಳನ್ನು ಉಲ್ಲೇಖ (೧) ರಂತೆ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಸರಕಾರ ಅನುಮತಿ ನೀಡಿದೆ. ಕನ್ನಡ ವಿಶ್ವವಿದ್ಯಾಲಯದ ಪರಿನಿಯಮ ಹಾಗೂ ರಾಜ್ಯ ಸರ್ಕಾರದ ಸೂಚನೆಗಳನ್ವಯ ನೇಮಕಾತಿ ಅಧಿಸೂಚನೆಯನ್ನು ಈ ಕೆಳಕಂಡ ಅರ್ಹ ಪ್ರವರ್ಗಗಳ ಅಭ್ಯರ್ಥಿಗಳಿಂದ ನಿಗಧಿತ ಅರ್ಜಿ ನಮೂನೆಯಲ್ಲಿ (ಎಂಟು ಸೆಟ್)ಗಳಲ್ಲಿ ಆಹ್ವಾನಿಸಲಾಗಿದೆ. ಖಾಲಿಯಿರುವ ಹುದ್ದೆಗಳ ಮತ್ತು ಮೀಸಲಾತಿ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಹುದ್ದೆಗಳ ವಿವರ | ಖಾಲಿ ಹುದ್ದೆ |
|---|---|---|
| 1 | ಸಹಾಯಕ ಗ್ರಂಥಪಾಲಕ | 01–ಸಾಮಾನ್ಯ (ಮೆ) |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ | 01–ಸಾಮಾನ್ಯ (ಮೆ) |
| 3 | ಶೀಘ್ರ ಲಿಪಿಗಾರರು | 01–ಸಾಮಾನ್ಯ (ಮೆ)<br>01–ಪ.ಜಾ. (ಮೆ) |
| 4 | ಗ್ರಂಥಾಲಯ ಸಹಾಯಕ | 01–ಸಾಮಾನ್ಯ (ಮೆ)<br>01–ಪ.ಜಾ. (ಮೆ) |
| | ಒಟ್ಟು | **06** |

* ಮೆ–ಮೆರಿಟ್

## ಬೋಧಕೇತರ ಹುದ್ದೆಗಳ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿಗಳ ವಿವರ :

| ಕ್ರ.ಸಂ. | ಹುದ್ದೆ | ಹುದ್ದೆಯ ವೇತನ ಶ್ರೇಣಿ | ಅರ್ಹತೆ |
|---|---|---|---|
| **1** | **ಸಹಾಯಕ ಗ್ರಂಥಪಾಲಕ** | **ರೂ. 15600–39100<br>+ AGP 6000** | **ಯುಜಿಸಿ ನಿಗಧಿಪಡಿಸಿದ ಅರ್ಹತೆಗಳು ಹಾಗೂ ಕಾಲ ಕಾಲಕ್ಕೆ ಸರ್ಕಾರ ಮತ್ತು ವಿಶ್ವವಿದ್ಯಾಲಯ ಸೂಚಿಸುವ ನಿಯಮಗಳು ಅನ್ವಯಿಸುತ್ತವೆ.** |
| **2** | **ಸಹಾಯಕ ತೋಟಗಾರಿಕೆ ಅಧಿಕಾರಿ** | **ರೂ. 16,000–29,600** | **1. ಬಿ.ಎಸ್.ಸಿ. ತೋಟಗಾರಿಕೆ ಪದವಿದರರಾಗಿರಬೇಕು. ಶೇ 50 ಅಂಕಗಳಲ್ಲಿ ಉತ್ತೀರ್ಣರಾಗಿರಬೇಕು.<br>2. ಮನ್ನಣೆ ಪಡೆದ ತೋಟಗಾರಿಕೆ ಸಂಸ್ಥೆಯಲ್ಲಿ 2 ವರ್ಷಗಳ ಅನುಭವ ಇರಬೇಕು.<br>3. ಕನ್ನಡ ಭಾಷೆ ಹಾಗೂ ಕಂಪ್ಯೂಟರ್ ಜ್ಞಾನ ಬಲ್ಲವರಾಗಿರಬೇಕು.** |

| | | | |
|---|---|---|---|
| 3 | ಶೀಘ್ರ ಲಿಪಿಗಾರರು | ರೂ. 16,000–29,600 | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ.<br>2) ಕನ್ನಡ ಮತ್ತು ಅಂಗ್ಲ ಭಾಷೆಯಲ್ಲಿ ಶೀಘ್ರ ಲಿಪಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>3) ಕಂಪ್ಯೂಟರ್ ಜ್ಞಾನ ಅವಶ್ಯ.<br>4) ಕನ್ನಡ ಭಾಷೆಯ ಜ್ಞಾನ ಇರಬೇಕು. |
| 4. | ಗ್ರಂಥಾಲಯ ಸಹಾಯಕ | ರೂ. 16,000–29,600 | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಲಿಬ್. ಸೈನ್ಸ್‌ನಲ್ಲಿ ಪದವಿಯಲ್ಲಿ ಶೇ 50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.<br>2) ಗ್ರಂಥಾಲಯದಲ್ಲಿ 3 ವರ್ಷಗಳ ಅನುಭವ ಇರಬೇಕು.<br>3) ಕಂಪ್ಯೂಟರ್ ಬೇಸಿಕ್ ಜ್ಞಾನ ಹೊಂದಿದ ಬಗ್ಗೆ ಪ್ರಮಣ ಪತ್ರ ಇರಬೇಕು.<br>4) ಕನ್ನಡ ಭಾಷೆಯ ಜ್ಞಾನ ಇರಬೇಕು. |

**ವಿಶೇಷ ಸೂಚನೆ :**

1. ಸಹಾಯಕ ಗ್ರಂಥಪಾಲಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಯುಜಿಸಿಯು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ವಿದ್ಯಾರ್ಹತೆ, ವೇತನ ಮತ್ತಿತರೆ ಅರ್ಹತೆಗಳನ್ನು ಸದರಿ ಹುದ್ದೆಗಳಿಗೆ ಅನ್ವಯಿಸುವುದು. ಉಳಿದ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮ ಹಾಗೂ ರಾಜ್ಯ ಸರ್ಕಾರದ ಸೂಚನೆಗಳಂತೆ ಅನುಸರಿಸಲಾಗುವುದು.
2. ನಿರ್ವಹಣಾ ಶುಲ್ಕ ರೂ. 500/– (ಸಾಮಾನ್ಯ ಅಭ್ಯರ್ಥಿಗಳಿಗೆ) ರೂ. 250 (ಪ.ಜಾ./ಪ.ಪಂ./ಪ್ರ.ವರ್ಗ–1 ಅಭ್ಯರ್ಥಿಗಳಿಗೆ) ಡಿ.ಡಿ.ಯನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಹೆಸರಿಗೆ ಸಂದಾಯವಾಗುವಂತೆ ರಾಷ್ಟ್ರೀಯಕೃತ ಬ್ಯಾಂಕಿನಿಂದ ಪಡೆಯುವುದು.
3. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವವರು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ನಿರ್ವಹಣಾ ಶುಲ್ಕದೊಂದಿಗೆ ಸಲ್ಲಿಸುವುದು.
4. ಆಯ್ಕೆಗೊಂಡ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಯಾವುದೇ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವುದು.
5. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.
6. ನಿಗದಿತ ಅವಧಿ ಮೀರಿ ಬಂದ ಹಾಗೂ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಹುದ್ದೆಗಳ ನೇಮಕಾತಿಗೆ ಯಾವುದೇ ರೀತಿಯ ಪ್ರಭಾವ ಅಥವಾ ಒತ್ತಡಗಳನ್ನು ಅಭ್ಯರ್ಥಿಗಳು ತರುವಂತಿಲ್ಲ. ಅಂತಹ ಒತ್ತಡಗಳನ್ನು ಅಪರಾಧ ಎಂದು ಪರಿಗಣಿಸಲಾಗುವುದು.
8. ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನ, ಆಯ್ಕೆ ಮುಂತಾದ ಪ್ರಕ್ರಿಯೆಗಳಿಗೆ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.org ನೋಡುವುದು.
9. ಈ ಹುದ್ದೆಗಳ ನೇಮಕಾತಿಯು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ 572 ಯುಎನ್‌ಇ 2014 ದಿನಾಂಕ 27.09.2017ರ ಷರತ್ತಿಗೊಳಪಟ್ಟಂತೆ ಸದರಿ ನೇಮಕಾತಿಗಳು ಸರ್ಕಾರದ ಅನುಮೋದನೆಯ ನಂತರ ಸಿಂಧುಗೊಳ್ಳುತ್ತವೆ.
10. ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ 10–11–2017 ರ ಸಂಜೆ 5–30 ರ** ಒಳಗಾಗಿ ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ–583276 ರವರಿಗೆ ಖುದ್ದಾಗಿ ಅಥವಾ ಪೋಸ್ಟ್ ಮೂಲಕ ಸಲ್ಲಿಸುವುದು.
11. ವಿಶ್ವವಿದ್ಯಾಲಯವು ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಥವಾ ಬದಲಿಸುವ ಪುನರ್ ವಿಂಗಡಿಸುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.
12. ವಿಶ್ವವಿದ್ಯಾಲಯವು ಜಾಹೀರಾತಿನಲ್ಲಿ ಸೂಚಿಸಿದ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.
13. ವಿಶ್ವವಿದ್ಯಾಲಯವು ಯಾವುದೇ ಅಂಚೆ ವಿಳಂಬಕ್ಕೆ ಹೊಣೆಯಾಗುವುದಿಲ್ಲ.

14. ಮೀಸಲಾತಿ ಬಯಸುವ ಅಭ್ಯರ್ಥಿಗಳು ತತ್ಸಂಬಂಧದ ಪ್ರಮಾಣಪತ್ರಗಳನ್ನು ದೃಢೀಕರಣದೊಂದಿಗೆ ಅಗತ್ಯವಾಗಿ ಲಗತ್ತಿಸುವುದು.
15. ಜಾಹೀರಾತಿನಲ್ಲಿ ತೋರಿಸಿರುವಂತೆ ಆಯ್ಕೆ, ನೇಮಕಾತಿ, ಸಂದರ್ಶನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
16. ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
17. ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಪರೀಕ್ಷೆ, ಸಂದರ್ಶನ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ನೋಡುವುದು. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಗಳು ಇರುವುದಿಲ್ಲ.

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ